ಮಾಡಿದಪ್ಪಯುಕ್ತ ಹುದ್ದೆಗೆ ಅರ್ಜಿ ಹಾಕುವ ಹಾಗಿಲ್ಲ. ಆದ್ದರಿಂದ ಮೇಲ್ಕಂಡ ಐದು ಮಂದಿಗೆ ಮಾನವೀಯತೆಯ ದೃಷ್ಟಿಯಿಂದ ಕೆಲಸಕ್ಕೆ ತೆಗೆದುಕೊಳ್ಳುವಂತೆ ಆದೇಶ ನೀಡಲು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಮಾನವೀಯತೆಯ ದೃಷ್ಟಿಯಿಂದ ಏನು ಕೆಲಸ ಕೊಡಿಸ ಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ ಆ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳಿಗೆ, ಅಧಿಕಾರಿ ಗಳಿಗೆ ತಿಳಿಸಿ ಸರಿಯಾದ ಏರ್ಪಾಡು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

೧೮) ಉಡುಪಿ ತಾಲ್ಲೂಕು ಕಾಪು ಕ್ಷೇತ್ರದ ಕಟಪಾಡಿ ಮಂಡಲದ ಮಟ್ಟು ಅಣೆಕಟ್ಟು ದುರಸ್ತಿ ಮಾಡುವುದು

ಶ್ರೀ ವಸಂತ ವಿ. ಸಾಲಿಯಾನ್.—ಉಡುಪಿ ತಾಲ್ಲೂಕು ಕಾಪು ಕ್ಷೇತ್ರದ ಕಟಪಾಡಿ ಮಂಡಲದ ಮಟ್ಟು ಅಣೆಕಟ್ಟು ನಾದುರಸ್ತಿಯಲ್ಲಿದ್ದು ಸುಮಾರು ೮ ವರ್ಷಗಳಾಯಿತು. ಅನೇಕ ಭಾರಿ ವಿಧಾನ ಸಭೆಯಲ್ಲಿ ಚರ್ಚಿಸಿದರೂ ಈ ತನಕ ಯಾವ ಕ್ರಮ ತೆಗೆದುಕೊಳ್ಳಲಿಲ್ಲ. ಈಗ ಜನರಿಗೆ ಒಂದು ಕಡೆ ಯಿಂದ ಇನ್ನೊಂದು ಕಡೆಗೆ ಹಾದು ಹೋಗಲು ಸಹ ಆಗುವುದಿಲ್ಲ. ಸರಕಾರವು ಕೂಡಲೇ ಈ ವಿಷಯ ವನ್ನು ಪರಿಶೀಲಿಸಿ ಸಾರ್ವಜನಿಕರು ಸಂಚರಿಸಲು ಅನುಕೂಲವಾಗುವ ಹಾಗೆ ಕ್ರಮ ತೆಗೆದುಕೊಳ್ಳ ಬೇಕಾಗಿ ಈ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಸಂಬಂಧಪಟ್ಟ ಮಂತ್ರಿಗಳು ಆ ಸದನದಲ್ಲಿದ್ದಾರೆ. ನಂತರ ಉತ್ತರ ವನ್ನೂ ತರಿಸಿಕೊಡಲಾಗುವುದು.

೧೯) ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕು ಹತ್ಯಡ್ಕ ಗ್ರಾಮದ ಶ್ರೀ ವಸಂತ ಕುಮಾರ್‌ರವರಿಂದ ಮಂಗಳೂರು ಡಿ.ಎಫ್.ಒ. ರವರು ೩,೦೦೦ ರೂಪಾಯಿ ಲಂಚ ಕೇಳಿರುವುದು

ಶ್ರೀ ವಸಂತ ಬಂಗೇರ.—ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕು ಹತ್ಯಡ್ಕ ಗ್ರಾಮದ ಡಿ. ದಂಬೆ ಸುಬ್ರಾಯರ ಮಗ ಶ್ರೀ ವಸಂತಕುಮಾರ್ ಎಂಬುವರು ತನ್ನ ಪಟ್ಟಾ ಸ್ಥಳದಲ್ಲಿ ರಬ್ಬರ್ ಕೃಷಿಮಾಡುವವರೇ ಮರ ಕಡಿಯಲು ಅನುಮತಿ ಕೋರಿ ಮಂಗಳೂರು ಡಿ.ಎಫ್.ಒ. ಇವರಿಗೆ ಎರಡು ವರ್ಷಗಳ ಹಿಂದೆ ಅರ್ಜಿ ಸಲ್ಲಿಸಿದ್ದರು. ಸದ್ರಿಯವರು ಸಲ್ಲಿಸಿದ ಅರ್ಜಿಯಂತೆ ಆರ್.ಎಫ್.ಒ. ಮತ್ತು ಎ.ಸಿ.ಎಫ್. ರವರು ಸದ್ರಿಯವರಿಗೆ ಅನುಮತಿ ನೀಡಬಹುದೆಂದು ಶಿಫಾರಸ್ಸು ಮಾಡಿದ್ದರು. ಆದರೆ ಡಿ.ಸಿ.ಎಫ್. ಮಂಗಳೂರು ಇವರು ಅನುಮತಿ ನೀಡಲಿಲ್ಲ. ಅನುಮತಿಗೆ ಕಾದು ಕಾದು ಅನುಮತಿ ದೊರೆಯದಿದ್ದಾಗ ಕ್ಲಪ್ತ ಸಮಯಕ್ಕೆ ರಬ್ಬರು ಗಿಡಗಳನ್ನು ನೆಡಬೇಕಾದ ಪ್ರಮೇಯ ಬಂದೊದಗಿದ್ದು ದರಿಂದ ಸದ್ರಿ ಶ್ರೀ ವಸಂತಕುಮಾರ್‌ರವರು ಸದ್ರಿ ಜಾಗದ ಮರಗಳನ್ನು ಕಡಿಸಿದಾಗ ಕೇಸು ದಾಖಲಾಯಿತು. ಅದಕ್ಕೆ ಒಪ್ಪಿಕೊಂಡು ದಂಡನೆ ಕಟ್ಟುವುದಾಗಿ ತಿಳಿಸಿದ್ದರು. ಆದರೂ ಮಂಗಳೂರು ಡಿ.ಎಫ್.ಒ. ರವರು ರೂಪಾಯಿ ೩,೦೦೦ (ಮೂರು ಸಾವಿರ) ಲಂಚ ಕೊಡಬೇಕೆಂದು ಕೇಳಿದಾಗ ಶ್ರೀ ವಸಂತಕುಮಾರ್ ನಿರಾಕರಿಸಿದರು. ಲಂಚ ನೀಡಲು ನಿರಾಕರಿಸಿದಾಗ ಕುಪಿತಗೊಂಡ ಮಂಗಳೂರು ಡಿ.ಎಫ್.ಒ. ರವರು ವಿಧಿಸಬೇಕಾದ ಗರಿಷ್ಠ ದಂಡ ರೂಪಾಯಿ ೫೦೦೦-೦೦ (ರೂ. ಐದು ಸಾವಿರ)ದ ಬದಲಾಗಿ ರೂಪಾಯಿ ೧೦,೮೦೦-೦೦ ದಂಡ ವಿಧಿಸಿದರು. ನಿರ್ವಹಣೆಯಿಲ್ಲದ ಪಾರ್ಟಿಯು ದಂಡವನ್ನು ತೆತ್ತಿದ್ದಾರೆ. ಆದರೆ ಈ ವಿಚಾರದಲ್ಲಿ ಶ್ರೀ ವಸಂತಕುಮಾರ್ ಮಾನ್ಯ ಮುಖ್ಯಮಂತ್ರಿಯವರಿಗೂ, ಅರಣ್ಯ ಸಚಿವರಿಗೂ ಅಲ್ಲದೆ ನನಗೂ ನಡೆದ ವಿಷಯದ ಬಗ್ಗೆ ಬರೆದು ಕೊಂಡಿದ್ದರು. ಈ ಬರಿತು ಇದುವರೆಗೆ ವಿಚಾರಣೆ ನಡೆಯದಿರಲು ಕಾರಣವೇನು ? ಅವರ ಉಳಿಕೆ ಮೊಬಲಗನ್ನು ಹಿಂದಕ್ಕೆ ಕೊಡಿಸಿ ಸದ್ರಿ ಮಂಗಳೂರು ಡಿ.ಎಫ್.ಒ. ಇವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಿರಾ ?

ಶ್ರೀ ಜಿ.ಎಸ್. ಬಾಗಲಕೋಟಿ (ಅರಣ್ಯ ಸಚಿವರು).—ನಾನು ಈ ಕೆಳಗಿನ ಹೇಳಿಕೆಯನ್ನು ಮಾಡಬಯಸುತ್ತೇನೆ

ದಕ್ಷಿಣ ಕನ್ನಡ ಜಿಲ್ಲಾ, ಬೆಳ್ತಂಗಡಿ ತಾಲ್ಲೂಕು ಹತ್ಯಡ್ಕ ಗ್ರಾಮದ ಹಂಚಿ ಸುಬ್ರಾಯರ ಮಗ ರಮೇಶ್‌ರಾವ್, ಮಂಗಳೂರು ಡಿ.ಎಫ್.ಓ. ರವರಿಗೆ ಎರಡು ವರ್ಷಗಳ ಹಿಂದೆ ಮರ ಕಡಿಯಲು ಅನುಮತಿ ಕೋರಿ ಅರ್ಜಿ ಸಲ್ಲಿಸಿರುವುದಿಲ್ಲ. ಆದರೆ ಶ್ರೀ ಡಿ. ವಸಂತಕುಮಾರ್ ಹಂಚಿ ಸುಬ್ರಾಯರ ಮಗ ಇವರು ೨೬-೯-೮೪ ರಂದು ಉಪ್ಪಿನಂಗಡಿ ವಲಯಾಧಿಕಾರಿಯವರಿಗೆ ಮರ ಕಡಿಯುವ ಬಗ್ಗೆ ಅರ್ಜಿ ಸಲ್ಲಿಸಿದ್ದರು. ಉಪ್ಪಿನಂಗಡಿ ವಲಯಾಧಿಕಾರಿಯವರು ಸ್ಥಳವನ್ನು ಭೂದಾಖಲೆಗಳ ಸಹಾಯ ನಿರ್ದೇಶಕರವರಿಂದ ಸರ್ವೆ ಮಾಡಿಸಿ ಸಹಾಯಕ ಕಮೀಷನ್ನರಿಂದ ಒಡೆತನ ದೃಢೀಕರಣ ಪತ್ರವನ್ನು ಪಡೆದುಕೊಂಡರು, ಅಲ್ಲದೆ ಶ್ರೀಯುತ ವಸಂತಕುಮಾರರು ೨೬-೯-೮೬ ರಂದು ಸದರಿ ಸ್ಥಳವು ರಬ್ಬರ್ ಕೃಷಿಗೆ ಯೋಗ್ಯವೆಂಬ ಬಗ್ಗೆ ರಬ್ಬರ್ ಮಂಡಲಿ ಅಧಿಕಾರಿ, ಮಂಗಳೂರು ಇವರಿಂದ ದೃಢ ಪತ್ರಿಕೆಯನ್ನು ಪಡೆದು ವಲಯಾಧಿಕಾರಿಯವರಿಗೆ ಸಲ್ಲಿಸಿರುತ್ತಾರೆ. ಅಲ್ಲದೆ ಕೃಷಿ ಮಾಡಲು ಬಗ್ಗೆ ಅಗತ್ಯವಿರುವ ಹಣ ಕಾಸಿನ ಸಾಲದ ಸೌಲಭ್ಯದ ಬಗ್ಗೆ ದಿನಾಂಕ ೧೦-೧೨-೮೬ ರಂದು ಬೆಳ್ತಂಗಡಿ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್, ನಿಯಮಿತ ಇವರಿಂದ ಪಡೆದು ಒಪ್ಪಿಸಿರುತ್ತಾರೆ. ಹೀಗೆ ಅಪೂರ್ಣ ಸ್ಥಿತಿಯಲ್ಲಿದ್ದ ಮೇಲಿನ ಕಡತ ಉಪ್ಪಿನಂಗಡಿ ವಲಯಾಧಿಕಾರಿಯವರ ಕಚೇರಿಯಲ್ಲಿ ಪೆಂಡಿಂಗ್ ಬಗ್ಗೆ ಬಾಕಿ ಇತ್ತು. ಆದುದರಿಂದ ಇದನ್ನು ಆರ್.ಎಫ್.ಓ. ಆಗಲೀ ಅಥವಾ ಎ.ಸಿ.ಎಫ್. ಆಗಲೀ ಮರ ಕಡಿಯಲು ಶಿಫಾರಸ್ಸು ಮಾಡುವ ಪ್ರಮೇಯವು ಉದ್ಭವಿಸುವುದಿಲ್ಲ. ಅಂತೆಯೇ ಡಿ.ಎಫ್.ಓ. ರವರು ಮೇಲಿನ ಕಡತಕ್ಕೆ ಮರಕಡಿಯಲು ಅನುಮತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ದಿನಾಂಕ ೩೦-೧-೧೯೮೭ ರಂದು ಸದರಿ ವಸಂತ ಕುಮಾರರ ಮೇಲೆ ತನ್ನ ವರ್ಗ ಸ್ಥಳದಲ್ಲಿ ಅನುಮತಿಯಿಲ್ಲದೆ ಮರಗಳನ್ನು ಕಡಿದು ೨೨೭ ದಿಮ್ಮಿ ಅಂದರೆ ೭೧.೯೪೪ ಘನಮೀಟರ್ ಮರ ಹಾಗೂ ೩೦೭ ಘನ ಮೀಟರ್ ಕಟ್ಟಿಗೆ ತಯಾರಿಸಿದ ಬಗ್ಗೆ ಅರಣ್ಯ ತಕ್ಷೀರು ನಂಬ್ರ : ೧೧೯:೮೬-೮೭ರ ಪ್ರಕಾರ ದಾಖಲೆ ಮಾಡಲಾಗಿತ್ತು.

ಸಂಬಂಧಪಟ್ಟ ತಕ್ಷೀರಿನ ತನಿಖಾ ವರದಿಯನ್ನು ಉಪ್ಪಿನಂಗಡಿ ವಲಯಾಧಿಕಾರಿಯವರು ಮೇಲೆ ಹೇಳಿದ ಎಲ್ಲಾ ಕಡತದೊಂದಿಗೆ ಮೊಟ್ಟ ಮೊದಲ ಬಾರಿಗೆ ಡಿ.ಎಫ್.ಓ. ರವರ ಕಚೇರಿಗೆ ೨೬-೩-೮೭ ರಂದು ಕಳುಹಿಸಿಕೊಟ್ಟರು. ಸದರಿ ಕಡತವು ಡಿ.ಎಫ್.ಓ. ರವರ ಕಚೇರಿಯಲ್ಲಿ ೨೮-೩-೮೭ ರಂದು ಸ್ವೀಕೃತವಾಯಿತು.

ಸದರಿ ಕಡತವನ್ನು ೭-೪-೮೭ ರಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಂಚಾರಿ ದಳ, ಮಂಗಳೂರು ಇವರಿಗೆ ಸ್ಥಳ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿ ಕಳುಹಿಸಲಾಯಿತು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರು ತನಿಖೆ ನಡೆಸಿ ಆಪಾದಿತರು ಒಪ್ಪಿರುವ ಕಾರಣ ತಕ್ಷೀರನ್ನು ರೂ. ೭೦೦೦.೦೦ಕ್ಕೆ ದಂಡನೆ ವಿಧಿಸಿ ತೀರ್ಮಾನಿಸುವಂತೆ ಶಿಫಾರಸ್ಸು ಮಾಡಿದ್ದರು.

ಬಹಳ ದೊಡ್ಡ ಪ್ರಮಾಣದಲ್ಲಿ ಕಡಿತಲೆಯಾಗಿರುವುದರಿಂದ ಮತ್ತು ಇಂತಹ ಪ್ರಸಂಗಗಳನ್ನು ಕಠಿಣವಾಗಿ ಪರಿಗಣಿಸಿದಿದ್ದರೆ ಇವು ಮುಂದಕ್ಕೆ ಇಂಥಾ ಪ್ರಕರಣಗಳ ಪುನರಾವರ್ತನೆಗೆ ಎಡೆಮಾಡಿ ಕೊಡಬಹುದಾದುದರಿಂದ ಕಡಿದ ಪ್ರತಿ ಮರವನ್ನು ಒಂದೊಂದು ತಕ್ಷೀರೆಂದು ತೀರ್ಮಾನಿಸಿ ಪ್ರತಿ ಯೊಂದು ಮರಕ್ಕೆ ರೂಪಾಯಿ ೭೫-೦೦ನ್ನು ದಂಡನೆಯಾಗಿ ವಿಧಿಸಿ ತಕ್ಷೀರನ್ನು ರಾಜೀ ತೀರ್ಮಾನ ಮಾಡಲಾಯಿತು. ಕಡಿದ ಮರಗಳ ಸಂಖ್ಯೆ ೧೪೪. ಆದುದರಿಂದ ವಿಧಿಸಿದ ದಂಡನೆಯ ಒಟ್ಟು ಮೊತ್ತ ೧೦,೮೦೦.೦೦ ಆಯಿತು.

ಈ ಬಗ್ಗೆ ಶ್ರೀ ಡಿ. ವಸಂತ ಕುಮಾರ್‌ರವರು ಮಾನ್ಯ ಮುಖ್ಯ ಮಂತ್ರಿಯವರಿಗೆ ಬರೆದ ದೂರು ಅರ್ಜಿ ದಿನಾಂಕ ೨-೭-೮೭ ಅನ್ನು ಇಲಾಖಾ ಜಾಗೃತ ಅಧಿಕಾರಿಯಾದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಾರ್ವತ್ರಿಕ) ಯವರ ತನಿಖೆಯಲ್ಲಿದೆ. ತನಿಖೆ ವರದಿ ಬಂದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

೧-೩೦ ಪಿ.ಎಂ.

೧೨) ಉತ್ತರ ಕನ್ನಡ ಜಿಲ್ಲಾ ಸಿದ್ದಾಪುರ ತಾಲ್ಲೂಕು, ಕ್ಯಾಡಗಿ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳು ಹಾಗೂ ಅಧಿಕಾರಿಗಳು ಹಣದ ದುರುಪಯೋಗ ಮಾಡುತ್ತಿರುವುದು

ಶ್ರೀ ಗೋಪಾಲ ಮುಕುಂದ ಕಾನಡೆ.— ಉತ್ತರ ಕನ್ನಡ ಜಿಲ್ಲಾ ಸಿದ್ದಾಪುರ ತಾಲ್ಲೂಕು, ಕ್ಯಾಡಗಿ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳು ಹಾಗೂ ಅಧಿಕಾರಿಗಳು ಹಣದ ದುರುಪಯೋಗ